ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001
ದೂರವಾಣಿ ಸಂಖ್ಯೆ:080-22342161, e-mail : karnregs.fin@gmail.com

ಸಂಖ್ಯೆ: ಗ್ರಾಅಪ 965 ಉಖಾಯೋ: 2016 ದಿನಾಂಕ: 30-05-2017.

ಗೆ,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು.

ಮಾನ್ಯರೆ,

ವಿಷಯ:- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾಮಗ್ರಿ ಬಿಲ್ಲುಗಳಿಗೆ ಸಂಬಂಧಿಸಿದಂತೆ ರಾಜಧನ(Royalty) ಕಡಿತಗೊಳಿಸುವ ಕುರಿತು.

ಉಲ್ಲೇಖ:- ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ಇವರ ಪತ್ರದ ಸಂಖ್ಯೆ ಗಭೂಇ/ಕಗಗು-ಡಿಸಿಬಿ/2016-17/845 ದಿನಾಂಕ 18-03-2017

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾಮಗ್ರಿ ಬಿಲ್ಲುಗಳಿಗೆ ಸಂಬಂಧಿಸಿದಂತೆ ರಾಜಧನ(Royalty) ಕಡಿತಗೊಳಿಸುವ ಕುರಿತು ಉಲ್ಲೇಖದ ಪತ್ರದ ರೀತ್ಯಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಸ್ಪಷ್ಟೀಕರಣ ನೀಡಿರುವ ಪತ್ರದ ಪ್ರತಿಯನ್ನು ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಿ ಕಳುಹಿಸಿದ್ದು, ಪತ್ರದಲ್ಲಿನ ಮಾರ್ಗಸೂಚಿಯಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾಮಗ್ರಿ ಬಿಲ್ಲುಗಳಿಗೆ ಸಂಬಂಧಿಸಿದಂತೆ ರಾಜಧನ(Royalty) ಕಡಿತಗೊಳಿಸುವ ಕುರಿತು ಅಗತ್ಯ ಕ್ರಮ ವಹಿಸಲು ನಿರ್ದೇಶಿಸಿದೆ. ರಾಯಲ್ಟಿ ಷೆಡ್ಯೂಲ್ ಪ್ರತಿಯನ್ನು ಇ ಮೇಲ್ ಮೂಲಕ ಕಳುಹಿಸಲಾಗುವುದು.

ಹಿಂದಿನ ವರ್ಷಗಳಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಸಾಮಗ್ರಿ ಬಿಲ್ಲಿನಲ್ಲಿ ರಾಜಧನವನ್ನು ಕಟಾಯಿಸಿ ಅದನ್ನು ಬ್ಯಾಂಕಿನಲ್ಲಿ ಇಟ್ಟುಕೊಳ್ಳಲಾಗಿದ್ದರೆ, ಅದರಲ್ಲಿ ಖನಿಜ ಮಾರಾಟದ ಪರವಾನಗಿ ಹೊಂದಿರುವವರಿಂದ ಕಟಾಯಿಸಲಾದ ರಾಜಧನದ ಬಾಬ್ತು ಹಣವನ್ನು ಪ್ರತ್ಯೇಕಿಸಿ ಆ ಹಣವನ್ನು ಕೂಡಲೇ SEGF ರಾಜ್ಯ ಬ್ಯಾಂಕ್ ಖಾತೆಗೆ ಖಾತೆ ಸಂಖ್ಯೆ 64002298270, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಜಿ ಸೇವಾ ಶಾಖೆ, ಶಿವಾಜಿನಗರ, ಬೆಂಗಳೂರು ಇಲ್ಲಿಗೆ ನೇರವಾಗಿ RTGS/NEFT ಮುಖಾಂತರ ದಿನಾಂಕ 10-06-2017ರೊಳಗಾಗಿ ವರ್ಗಾಯಿಸಲು ಕೋರಿದೆ.

ಹಾಗೆಯೇ ಪ್ರತ್ಯೇಕಿಸಲಾದ ಖನಿಜ ಮಾರಾಟದ ಪರವಾನಗಿ ಹೊಂದಿರುವವರಿಂದ ಕಟಾಯಿಸಲಾದ ರಾಜಧನದ ಬಾಬ್ತು ಹೊರತುಪಡಿಸಿ ಉಳಿಕೆ ಬಾಬ್ತಿನ ವಿವರಗಳನ್ನು ಪಟ್ಟಿ ಮಾಡಿ, ಆಯಾ ಜಿಲ್ಲೆಯಲ್ಲಿನ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಮುಖ್ಯಸ್ಥರೊಂದಿಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಉಳಿಕೆ ಬಾಬ್ತಿನ ಪಾವತಿ ಕುರಿತಂತೆ ಚರ್ಚಿಸಿ ತಮ್ಮ ಹಂತದಲ್ಲಿಯೇ ಸೂಕ್ತ ತೀರ್ಮಾನ ತೆಗೆದುಕೊಂಡು ಅಗತ್ಯ ಕ್ರಮ ಕೈಗೊಳ್ಳಲು ಕೋರಿದೆ. ಈ ಬಗ್ಗೆ ವರದಿಯನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ.

ತಮ್ಮ ವಿಶ್ವಾಸಿ

ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿ:-
1) ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯ ನಿರ್ವಾಹಕ ಅಧಿಕಾರಿಗಳ ಅಗತ್ಯ ಕ್ರಮಕ್ಕಾಗಿ.
2) ನಿರ್ದೇಶಕರು, ಇ-ಗೌರ್ನೆನ್ಸ್, ಗಣಕ ಕೋಶ, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರಿಗೆ ಕಳುಹಿಸುತ್ತಾ, ಇಲಾಖೆಯ ವೆಬ್ ಸೈಟಿನಲ್ಲಿ ಅರೋಹಿಸಲು ಕೋರಿದೆ.

D:\Jagannatha Accounts\IT & Vat Deduction Clarification